# ಕೊರೊನಾ ವೈರಸ್ ವಿರುದ್ಧ ಕಂಠದಾನ ಕಲಾವಿದರ ಧ್ವನಿ!

ಕೊರೊನಾ ವೈರಸ್ ವಿರುದ್ಧ ಜಾಗೃತಿ ಮೂಡಿಸುವ ಮೊಬೈಲ್ ಫೋನ್ ಸಂದೇಶಗಳ ಧ್ವನಿ ಯಾರದೆನ್ನುವ ಯೋಚನೆ ನಿಮಗೆ ಬಂದಿದೆಯೇ? ಆ ಕಲಾವಿದೆಯರ ಪರಿಚಯ ಇಲ್ಲಿದೆ. ವಿವಿಧ ಹಿನ್ನೆಲೆಯಿಂದ ಬಂದಿರುವ ಕಂಠದಾನ ಕಲಾವಿದೆಯರು, ಕೊರೊನಾ ವಿರುದ್ಧದ ಸಾಮಾಜಿಕ ಚಳವಳಿಯಲ್ಲಿ 'ಧ್ವನಿ'ಪಾತ್ರ ವಹಿಸಿದ್ದಾರೆ.

■ ಎಂ.ಎಸ್. ಶೋಭಿತ್

'ನೋವೆಲ್ ಕೊರೊನಾ ವೈರಸ್ ಹರಡುವುದನ್ನು ತಡೆಗಟ್ಟಬಹುದಾಗಿದೆ. ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರ ಅಥವಾ ಟಿಶ್ಯುವಿನಿಂದ ನಿಮ್ಮ ಬಾಯಿ ಮುಚ್ಚಿ. ಕೈಗಳನ್ನು ಆಗಾಗ ಸಾಬೂನು ಹಚ್ಚಿ ತೊಳೆಯುತ್ತಿರಿ. ನಿಮ್ಮ ಕಣ್ಣು,ಮೂಗು, ಬಾಯಿಯನ್ನು ಮುಟ್ಟುತ್ತಿರಬೇಡಿ. ಕೆಮ್ಮು, ಜ್ವರ ಅಥವಾ ಉಸಿರಾಟದ ತೊಂದರೆ ಆಗುತ್ತಿದ್ದರೆ, ಅವರಿಂದ ಕನಿಷ್ಠ 1 ಮೀ. ದೂರದಲ್ಲಿರಿ.'

ಈ ಜಾಗೃತಿ ಸಂದೇಶವನ್ನು ನೀವು ಖಂಡಿತ ಕೇಳಿರುತ್ತೀರಿ. ಕೊರೊನಾ ವೈರಸ್ ಭಾರತಕ್ಕೆ ಕಾಲಿಟ್ಟ ದಿನದಿಂದ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕ್ಷೇಮ ಮಂತ್ರಾಲಯ, ಜನರಲ್ಲಿ ವೈರಸ್ ಕುರಿತು ಜಾಗೃತಿ ಮೂಡಿಸಲು ಫೋನ್ ಮೂಲಕ ಈ ಧ್ವನಿಯನ್ನು ಬಿತ್ತರಿಸತೊಡಗಿತು. ಹಾಗಾದರೆ ಈ ಧ್ವನಿ ಯಾರದ್ದು ಎಂಬ ಕುತೂಹಲ ನಿಮಗಿರಬೇಕಲ್ಲವೇ? ಇವರು ಕಾರ್ಟೂನ್ ಲೋಕದಿಂದ ಹಿಡಿದು ಪ್ರಕಟಣೆ, ಜಾಹೀರಾತು, ಸಾಕ್ಷ್ಯಚಿತ್ರ, ಕಿರುಚಿತ್ರಗಳಿಗೆ ಕಂಠದಾನ ಮಾಡಿರುವ ವಿಶಿಷ್ಟ ಕಲಾವಿದರು. ಅವರಲ್ಲಿ ಕೆಲವು ಕಲಾವಿದರ ಪರಿಚಯ ಮಾಡಿಕೊಳ್ಳೋಣ ಬನ್ನಿ.

## ಡಾರೆಲ್ ಜೆಸಿಕಾ ಫರ್ನಾಂಡಿಸ್

ವೃತ್ತಿಯಲ್ಲಿ ದೈಹಿಕ ಶಿಕ್ಷಕಿಯಾಗಿರುವ ಜೆಸಿಕಾ ಮೂಲತಃ ಮಂಗಳೂರಿನ ಪಡೀಲ್‌ನವರು. 2013ರಲ್ಲಿ ದೆಹಲಿಯ ಕನ್ನಡ ಶಾಲೆಗೆ ದೈಹಿಕ ಶಿಕ್ಷಕಿಯಾಗಿ ಸೇರಿದರು. ಅಲ್ಲಿ ಅವರ ಧ್ವನಿಯನ್ನು ಗುರುತಿಸಿದವರು ದೆಹಲಿ ಕನ್ನಡ ಶಾಲೆಯ ಸಂಚಾಲಕ ಸರವು ಕೃಷ್ಣ ಭಟ್. 'ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿರುವಾಗ ಸರವು ಕೃಷ್ಣ ಭಟ್ ಅವರು ನನ್ನ ಧ್ವನಿ ಗುರುತಿಸಿ ವಾಯ್ಸ್ ಓವರ್ ಇಂಡಸ್ಟ್ರಿಯಲ್ಲಿ ನನ್ನನ್ನು ಪರಿಚಯಿಸಿದರು. ಧ್ವನಿದಾನ ಕೂಡ ನಟನೆಯಂತೆಯೇ ಒಂದು ಕಲೆ. ಇಲ್ಲಿ ಧ್ವನಿಯಿಂದಲೇ ನಟಿಸಬೇಕಾಗುತ್ತದೆ' ಎನ್ನುತ್ತಾರೆ ಜೆಸಿಕಾ.

ಕಳೆದ 7 ವರ್ಷಗಳಿಂದ ಬಿಡುವಿನ ವೇಳೆಯಲ್ಲಿ ಹವ್ಯಾಸಕ್ಕಾಗಿ ರೇಡಿಯೊ ಮತ್ತು ದೂರದರ್ಶನದಲ್ಲಿ ಪ್ರಸಾರವಾಗುವ ಅನೇಕ ಪ್ರಕಟಣೆಗಳು, ಜಾಹೀರಾತುಗಳಿಗೆ ಅವರು ಧ್ವನಿಯಾಗಿದ್ದಾರೆ. ಕೊರೊನಾ ಮೊದಲ ಹಂತದ ಜಾಗೃತಿ ಸಂದೇಶಕ್ಕೆ ಧ್ವನಿ ಅವರದೇ. 'ಜಾಗೃತಿ ಸಂದೇಶ ಮೂರು ಹಂತಗಳಲ್ಲಿ ಬಿತ್ತರಗೊಂಡಿದೆ. ಮೊದಲ ಹಂತದ ಧ್ವನಿ ನನ್ನದೇ ಆಗಿದ್ದರಿಂದ ಜನರಿಗೆ ಉಪದ್ರವ ಆಗಿದ್ದೇ ಹೆಚ್ಚಿರಬಹುದು. ಬರುಬರುತ್ತಾ ಜನರಿಗೆ ಸಂದೇಶದ ಅನಿವಾರ್ಯತೆ ಅರಿವಾಯಿತು. ಜಾಗೃತಿ ಮೂಡಿಸಿದ ಹೆಮ್ಮೆಯಂತೂ ಇದೆ' ಎನ್ನುತ್ತಾರೆ ಜೆಸಿಕಾ.

